ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಉಡುಪಿ.

ಸಿ.ಸಿಃ1379 /2024
ಚಾ. ಸಾ 04
ಪ್ರಾ.ಸಾ 03

ಸಾಕ್ಷಿದಾರರ ಹೆಸರು : ಮಹಾಲಿಂಗ
ತಂದೆಯ ಹೆಸರು : ಬೂದ
ವಯಸ್ಸು : 60
ಉದ್ಯೋಗ : ಚಾಲಕ
ವಾಸಸ್ಥಳ : ತೊಟ್ಟಂ , ಉಡುಪಿ

ದಿನಾಂಕಃ 17-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ಚಾಸಾ 1 ರವರು ನನ್ನ ಮಗ . ಚಾಸಾ 5 ನನ್ನ ಹೆಂಡತಿ . ನನ್ನ ಮನೆಯಲ್ಲಿ ನಾನು , ನನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳು ವಾಸವಾಗಿರುತ್ತೇವೆ . 30-06-2020 ರಂದು ನಾನು ಮತ್ತು ನನ್ನ ಹೆಂಡತಿ ಕೆಲಸಕ್ಕೆ ಹೊರಗೆ ಹೋಗಿದ್ದೆವು . ಆ ಸಮಯದಲ್ಲಿ ಚಾಸಾ 1 ರವರು ಮನೆಯಲ್ಲಿ ಒಬ್ಬರೇ ಇದ್ದರು . ನೀರು ಹೋಗಲು ಚರಂಡಿಯನ್ನು ಕ್ಲೀನ್ ಮಾಡುತಿದ್ದಾಗ 1 ನೇ ಆರೋಪಿ ಹೊನ್ನಯ್ಯ ಎನ್ನುವವರು ರಿಕ್ಷಾ ನಿಲ್ಲಿಸಿ ನೀನು ಒಬ್ಬನೇ ಇದ್ದಿಯಾ ನಿನ್ನನ್ನು ಕೊಂದು ಹಾಕುತ್ತೇನೆಎಂದು ಚಾಸಾ 1 ರವರಿಗೆ ಹೇಳಿ ಚಾಸಾ 1 ರವರಿಗೆ ಕತ್ತಿನ ಭಾಗಕ್ಕೆ ಕೈಯಲ್ಲಿ ಹೊಡೆದನು . ನಂತರ 3 ಜನ ಆರೋಪಿತರು ಬಂದು ಅದರಲ್ಲಿ 2 ನೇ ಆರೋಪಿ ಕಾಳು ಕೆನ್ನೆಗೆ ಹೊಡೆದನು ಮತ್ತು ಕೈಗೆ ಚೂರಿಯಿಂದ ಗಿರಿದನು ನಂತರ 3 ನೇ ಆರೋಪಿ ಅಣ್ಣಯ್ಯ ಕತ್ತಿಯಿಂದ ಅದೇ ಜಾಗಕ್ಕೆ ಗೀರಿದನು . 11.30 ಕ್ಕೆ ಗಲಾಟೆ ಆಯಿತು. 11.35 ಕ್ಕೆ ಈ ಬಗ್ಗೆ ನನಗೆ ಚಾಸಾ 1 ರವರು ಫೋನ್ ಮಾಡಿ ತಿಳಿಸಿರುತ್ತಾರೆ . ನಂತರ ನಾನು ಮನೆಗೆ ಹೋಗಿ ಚಾಸಾ 1 ರವರನ್ನು ಉಡುಪಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇನೆ . ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತೇನೆ . ಚಾಸಾ 1 ರವರಿಗೆ ಹೊಡೆದ ಆರೋಪಿತರನ್ನು ನೋಡಿದರೇ ಗುರುತಿಸುತ್ತೇನೆ. ಈ ದಿನ 1 ಮತ್ತು 2 ನೇ ಆರೋಪಿತರು ನ್ಯಾಯಾಲಯ ಮುಂದೆ ಇರುತ್ತಾರೆ, ಅವರನ್ನು ಸಾಕ್ಷಿ

ನೋಡಿ ಗುರುತಿಸಿರುತ್ತಾರೆ. 3ನೇ ಆರೋಪಿ ಗೈರು ಹಾಜರಾಗಿರುತ್ತಾರೆ ಅವರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಆ ದಿನ ಮಲ್ಪೆ ಕಾರು ಸ್ಟ್ಯಾಂಡ್ ಗೆ ಗಾಡಿಯನ್ನು ಬಾಡಿಗೆಗೆ ಓಡಿಸಲು ಹೋಗಿದ್ದೆ . ಘಟನೆ ನಡೆದ ದಿನ ಮನೆಯಲ್ಲಿ ಮಗ ಒಬ್ಬನೇ ಇದ್ದಾನೇ ಎಂದು ನಾನು ಬೇರೆಯವರಿಗೆ ಹೇಳಲಿಲ್ಲ ಕಾರಣ ಅವನು ದೊಡ್ಡವನಾಗಿದ್ದಾನೆ . ಸುರೇಶ್ ಚಾಸಾ 2 ನನ್ನ ಹೆಂಡತಿಯ ತಮ್ಮ . ಚಾಸಾ 3 ಕೂಡ ನನ್ನ ತಮ್ಮ . ಈ ಪ್ರಕರಣ ದಾಖಲಾಗುವ ಮೊದಲು ನನ್ನ ಮಗ ಮಾಸುಂ ರಾಜ್ ಅಣ್ಣಯ್ಯನಿಗೆ ರಾಡ್ ಹೊಡೆದ ಎಂದು ಪ್ರಕರಣ ದಾಖಲಾಗಿತ್ತು ಎಂದರೆ ಸರಿ . ನನ್ನ ಮಗ ಹಾರೆಯಲ್ಲಿ ಚರಂಡಿಯನ್ನು ಕ್ಲೀನ್ ಮಾಡುತಿದ್ದ . ಮನೆಯ ಕಾಂಪೌಂಡ್ ನ ಹೊರೆಗೆ ಆ ರೀತಿ ಗೇಟ್ ನ ಬಳಿ ಚರಂಡಿ ಕ್ಲೀನ್ ಮಾಡುತಿದ್ದ . ಗೇಟ್ ನಂತರ ರಸ್ತೆ ಇರುತ್ತದೆ ಎಂದರೆ ಸರಿ . ನಮ್ಮ ಮನೆಯ ಸುತ್ತಲೂ ವಠಾರ ಇರುತ್ತದೆ ಎಂದರೆ ಸರಿ . ನಾನು ಮನೆಗೆ 5 ನಿಮಿಷದಲ್ಲಿ ಬಂದೆ . ನಾನು ಮನೆಗೆ ಬರುವಾಗ ಮನೆಯಲ್ಲಿ ನನ್ನ ಮಗ ಒಬ್ಬನೇಇದ್ದ ಆ ಸಮಯದಲ್ಲಿ ನನ್ನ ಮಗನ ಕೈಗೆ ಗಾಯವಾಗಿ ರಕ್ತ ಬರುತಿತ್ತು . ಶರ್ಟ್ ಮತ್ತು ಪ್ಯಾಂಟ್ ಗೆ ರಕ್ತ ಆಗಿತ್ತೋ ಇಲ್ಲವೋ ಎಂದು ನಾನು ಗಮನಿಸಿಲ್ಲ. ನಾನು ಬಟ್ಟೆಯನ್ನು ಗಾಯಕ್ಕೆ ಕಟ್ಟಿಕೊಂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು 10 ನಿಮಿಷದಲ್ಲಿ ಮನೆಯಿಂದ ಕರೆದುಕೊಂಡು ಹೋಗಿರುತ್ತೇನೆ . ಮಲ್ಪೆಯಲ್ಲಿ ಆ ಸಮಯದಲ್ಲಿ ವೈದ್ಯರು ಇಲ್ಲದೇ ಇದ್ದ ಕಾರಣ ನಾನು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಬಂದೆ . ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗದೇ ಇರಲು ಕಾರಣ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆತ ಹೊಡೆದಿದಕ್ಕೆ ರುಜುವಾತು ಬೇಕಾಗಿತ್ತು ಆದ್ದರಿಂದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ನಮ್ಮ ಮನೆಯಿಂದ ಉಡುಪಿ ಸರ್ಕಾರಿ ಆಸ್ಪತ್ರೆಗೆ ಬರಲು 20 ನಿಮಿಷ ಬೇಕಾಗುತ್ತದೆ. ಆಸ್ಪತ್ರೆಯಲ್ಲಿ ನನ್ನ ಮಗ ಎಂಟ್ರಿ ಮಾಡಿಸಿರುತ್ತಾನೆ. ಆಸ್ಪತ್ರೆಗೆ ಹೋದ 30 ನಿಮಿಷದಲ್ಲಿ ನಮಗೆ ವೈದ್ಯರು ಸಿಕ್ಕಿರುತ್ತಾರೆ . ಸುಳ್ಳು ಕತೆಯನ್ನು ಸೃಷ್ಟಿ ಮಾಡಿ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆಸ ರಿಯಲ್ಲ . ನನ್ನ ಮಗ

ಚರಂಡಿ ಕ್ಲೀನ್ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ಆರೋಪಿತರು ನಮ್ಮ ಜಾಗಕ್ಕೆ ಬಂದಿಲ್ಲ ಮತ್ತು ಯಾವುದೇ ಆರೋಪಿತರು ನನ್ನ ಮಗನಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮಗನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನನ್ನ ಹೇಳಿಕೆ ಪಡೆದಿಲ್ಲ. ನಾನು ಹೇಳಿರುವಂತೆ 2 ಆರೋಪಿ ಮತ್ತು 3 ನೇ ಆರೋಪಿತರ ಕತ್ತಿ ಮತ್ತು ಚೂರಿಯಿಂದ ಗೀರಿಲ್ಲ ಎಂದರೆ ಸರಿಯಲ್ಲ. ಕಾಲು ಕೆನ್ನೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ . ನಮ್ಮ ಜಾಗಕ್ಕೆ ಆರೋಪಿತರು ಅಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ . 3 ನೇ ಆರೋಪಿ ನನ್ನ ಮಗನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರಿಂದ ನಾವು ಸುಳ್ಳು ದೂರು ಪೊಲೀಸ್ ಠಾಣೆಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ . ನನ್ನ ಮಗನಿಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ . ನಮ್ಮ ಮನೆಯಲ್ಲಿ ಸಿಸಿಟಿವಿ ಇಲ್ಲ . ಸಿಸಿಟಿವಿ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.